# ಮಹಾಸತಿಗಲ್ಲುಗಳು

**ತಾರಾ ಬಿ.ಎನ್.**

ಮುಖ್ಯಸ್ಥರು, ಇತಿಹಾಸ ವಿಭಾಗ, ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.17297222

## ABSTRACT:

ಸತಿ ಎಂದರೆ ಮೂಲತಃ ತನ್ನ ಗಂಡನ ಮರಣದ ನಂತರ ತನ್ನನ್ನು ತಾನೇ ಅಗ್ನಿಗಾಹುತಿ ಮಾಡಿಕೊಂಡ ಮಹಿಳೆ ಎಂದರ್ಥ. ಈ ಪದವು "ಅಸ್ತಿ" ಎಂಬ ಸಂಸ್ಕೃತ ಪದದಿಂದ ಬಂದಿದೆ. ಇದರರ್ಥ ಅವಳು ಶುದ್ಧ ಅಥವಾ ಸತ್ಯ. ಮಾಸ್ತಿ ಎಂಬುದು ಮಹಾಸತಿಯ ತದ್ಭವ. ಗಂಡ ಸತ್ತಾಗ ಅವನೊಡನೆ ಚಿತೆ ಏರುತ್ತಿದ್ದವಳು ಸತಿಯಾಗುತ್ತಿದ್ದಳು. ಅವಳನ್ನೇ "ಮಹಾಸತಿ" ಎಂದು ಕರೆದರು. ಈ ಮಹಾಸತಿಯು ಜನರ ಬಾಯಲ್ಲಿ "ಮಾಸ್ತಿ" ಯಾಗಿದೆ. ಹಿಂದೆ ಪತ್ನಿಯ ಆದರ್ಶವಾಗಿತ್ತು. ಸತಿಯಾಗುವುದರಲ್ಲಿ ಎರಡು ವಿಧ:

i. ಗಂಡನ ಕಳೇಬರದೊಡನೆ ಚಿತೆಯೇರುವುದು 'ಸಹಗಮನ'. ಗಂಡ ಸತ್ತಾಗ ಸಹಗಮನ ಮಾಡುವುದು.

ii. ಗಂಡ ಎಲ್ಲೋ ಸತ್ತ ಸುದ್ದಿಯನ್ನು ಕೇಳಿ ಚಿತೆಯನ್ನು ನಿರ್ಮಿಸಿ ಅದನ್ನು ಏರುವುದು 'ಅನುಗಮನ'.

ಮೊದಲನೆಯದರಲ್ಲಿ ಗಂಡನ ಜೊತೆಗೆ ಹೋಗುತ್ತಿದ್ದಾಳೆ ಎಂಬ ಅರ್ಥ ಬಂದರೆ, ಎರಡನೆಯದರಲ್ಲಿ ಗಂಡನನ್ನು ಹಿಂಬಾಲಿಸುತ್ತಿದ್ದಾಳೆ ಎಂಬ ಅರ್ಥ ಬರುತ್ತದೆ. ಹೀಗೆ ಸತಿ ಆದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು. ಮಾಸ್ತಿಗಲ್ಲುಗಳನ್ನು ಸಹಾನುಭೂತಿ ಕಲ್ಲು, ಮದವಳಿಗೆ ಕಲ್ಲು, ತೋಳ್ಳೈಗಲ್ಲು, ವ್ಯಾಸನ ತೋಳು ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

## KEYWORDS:

ಸತಿ, ಮಹಾಸತಿ, ಮಾಸ್ತಿಗಲ್ಲು, ಪ್ರಕೃತಿ, ತ್ಯಾಗ, ವಿನಯ, ಸಂಯಮ, ಶೀಲ.

**ಪೀಠಿಕೆ:**

ಪ್ರಕೃತಿಯು ಮಹಿಳೆಗೆ ಅಗಾಧ ಶಕ್ತಿಯನ್ನು ನೀಡಿದೆ, ಆದರೆ ಇತಿಹಾಸದಲ್ಲಿ ಅವಳ ಪಾತ್ರ ಮಾತ್ರ ತೀರ ಗೌಣ ಎಂದು ಬಿಲ್ ಹೆನ್ರಿ ಹೇಳುತ್ತಾರೆ. ಹೌದು ಮಹಿಳೆಗೆ ಪ್ರಕೃತಿಯಿಂದ ಅಗಾಧ ಶಕ್ತಿ ದೊರೆತಿರುವುದಂತೂ ನಿಜ, ಆದರೆ ಸಮಾಜದಲ್ಲಿ ಅವಳಿಗೆ ಹೆಚ್ಚಿನ ಸ್ಥಾನಮಾನ ಕೊಟ್ಟಿಲ್ಲ. ಗತಿ ವಿಗತಿ ಪಾಥೇಯಗಳ ಮಧ್ಯೆ ಆಕೆಯನ್ನು ಸಂಸ್ಕೃತಿಯ ಮೂಲಕ ನಯ ವಿನಯ ತ್ಯಾಗ, ಸಂಯಮ, ಶೀಲಗಳ ಆದರ್ಶದ ಚೌಕಟ್ಟಿನಲ್ಲಿ ಬಂಧಿಸಲಾಯಿತು. ಸತಿ, ಮಹಾಸತಿಗಳೆಂಬ ಗೌರವ ಪದವಿಗಳ ಮೂಲಕ ಆಕೆಯನ್ನು ಹತ್ತಿಕ್ಕುವ ಕೆಲಸ ಮಾಡಲಾಯಿತು. ಸತಿ ಅದು ಅವಳ ಮೌಲ್ಯ ಎತ್ತರಿಸುವ ಸಾಧನವಾಯಿತು. ಹಾಗಾಗಿ ಸತಿ ಮಹಾಸತಿಯಾಗಿ ಪರಿಗಣಿಸಲ್ಪಟ್ಟಳು. ಮುಂದೆ ಅದು ಬರುಬರುತ್ತ ಸಂಪ್ರದಾಯವಾಗಿ ಪರಿಣಮಿಸಿತು. ಕೇವಲ ಮಾಸ್ತಿಕಲ್ಲು ಮತ್ತು ಶಿಲ್ಪ ಸಹಿತ ಮಾಸ್ತಿಗಲ್ಲುಗಳು ಕರ್ನಾಟಕದಲ್ಲಿ ಸಾಕಷ್ಟು ದೊರೆತಿವೆ. ಶಾಸನಸಹಿತ ಮಾಸ್ತಿಗಲ್ಲುಗಳೂ ಲಭ್ಯವಾಗುತ್ತವೆ. ಸಾಂಸ್ಕೃತಿಕ ಬದುಕಿನ ಅಧ್ಯಯನಕ್ಕೆ ಇವು ಸಹಾಯಕಾರಿಯಾಗಿವೆ.

**ಐತಿಹಾಸಿಕ ಹಿನ್ನಲೆ:**

ಸತಿ ಎಂದರೆ ಮೂಲತಃ ತನ್ನ ಗಂಡನ ಮರಣದ ನಂತರ ತನ್ನನ್ನು ತಾನೇ ಅಗ್ನಿಗಾಹುತಿ ಮಾಡಿಕೊಂಡ ಮಹಿಳೆ ಎಂದರ್ಥ. ಈ ಪದವು "ಅಸ್ತಿ" ಎಂಬ ಸಂಸ್ಕೃತ ಪದದಿಂದ ಬಂದಿದೆ. ಇದರರ್ಥ ಅವಳು ಶುದ್ಧ ಅಥವಾ ಸತ್ಯ. ಮಾಸ್ತಿ ಎಂಬುದು ಮಹಾಸತಿಯ ತದ್ಭವ. ಗಂಡ ಸತ್ತಾಗ ಅವನೊಡನೆ ಚಿತೆ ಏರುತ್ತಿದ್ದವಳು ಸತಿಯಾಗುತ್ತಿದ್ದಳು. ಅವಳನ್ನೇ "ಮಹಾಸತಿ" ಎಂದು ಕರೆದರು. ಈ ಮಹಾಸತಿಯು ಜನರ ಬಾಯಲ್ಲಿ "ಮಾಸ್ತಿ" ಯಾಗಿದೆ. ಹಿಂದೆ ಪತ್ನಿಯ ಆದರ್ಶವಾಗಿತ್ತು. ಗಂಡನ ಕಳೇಬರದೊಡನೆ ಚಿತೆಯೇರುವುದು 'ಸಹಗಮನ'. ಗಂಡ ಸತ್ತಾಗ ಸಹಗಮನ ಮಾಡುವುದು.

**ಸತಿಯಾಗುವುದರಲ್ಲಿ ಎರಡು ವಿಧ:**

1. ಗಂಡನ ಕಳೇಬರದೊಡನೆ ಚಿತೆಯೇರುವುದು 'ಸಹಗಮನ'.
2. ಗಂಡ ಎಲ್ಲೋ ಸತ್ತ ಸುದ್ದಿಯನ್ನು ಕೇಳಿ ಚಿತೆಯನ್ನು ನಿರ್ಮಿಸಿ ಅದನ್ನು ಏರುವುದು 'ಅನುಗಮನ'.

ಮೊದಲನೆಯದರಲ್ಲಿ ಗಂಡನ ಜೊತೆಗೆ ಹೋಗುತ್ತಿದ್ದಾಳೆ ಎಂಬ ಅರ್ಥ ಬಂದರೆ, ಎರಡನೆಯದರಲ್ಲಿ ಗಂಡನನ್ನು ಹಿಂಬಾಲಿಸುತ್ತಿದ್ದಾಳೆ ಎಂಬ ಅರ್ಥ ಬರುತ್ತದೆ. ಹೀಗೆ ಸತಿ ಆದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು. ಮಾಸ್ತಿಗಲ್ಲುಗಳನ್ನು ಸಹಾನುಭೂತಿ ಕಲ್ಲು, ಮದವಳಿಗೆ ಕಲ್ಲು, ತೋಳ್ಕೈಗಲ್ಲು, ವ್ಯಾಸನ ತೋಳು ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

1. ಸತ್ತವನ ಶವದ ಜೊತೆಗೆ ಅವನಿಗೆ ಪ್ರಿಯವಾದ ವಸ್ತುಗಳನ್ನು ಇಡುವುದು.
2. ಮುಂದಿನ ಜನ್ಮದಲ್ಲಿ ಗಂಡ-ಹೆಂಡಿರಾಗಿಯೇ ಇರುವುದು.
3. ಮರಣ ನಂತರ ಹೆಂಡತಿ ಬೇರೆಯವರ ಪಾಲಾಗದಿರುವುದು. ಇತ್ಯಾದಿ ಕಾರಣಗಳು ಪ್ರೇರಣೆಯೆಂದು ತಿಳಿಯಲಾಗಿದೆ.

ಪೌರಾಣಿಕ ಪರಿಭಾಷೆಯಲ್ಲಿ, ಸತಿಯು ಶಿವನ ಹೆಂಡತಿಯ ಹೆಸರು, ಆಕೆಯ ತಂದೆ ಶಿವನನ್ನು ಎಂದಿಗೂ ಗೌರವಿಸಲಿಲ್ಲ ಮತ್ತು ಆಗಾಗ್ಗೆ ಅವನನ್ನು ತಿರಸ್ಕರಿಸುತ್ತಿದ್ದರು. ತನ್ನ ಗಂಡನ ಮೇಲೆ ಹೊಂದಿದ್ದ ದ್ವೇಷವನ್ನು ವಿರೋಧಿಸಲು ಅವಳು ತನ್ನನ್ನು ತಾನೇ ಸುಟ್ಟುಕೊಂಡಳು, ಆಗ ಅವಳು ಬೆಂಕಿಯಲ್ಲಿರುವಾಗ ಮತ್ತೆ ಶಿವನ ಹೆಂಡತಿಯಾಗಿ ಮರುಜನ್ಮ ನೀಡಬೇಕೆಂದು ಪ್ರಾರ್ಥಿಸಿದಳು. ನಂತರ ಅವಳ ಹೊಸ ಅವತಾರವನ್ನು ಸತಿಸಹಗಮನ ಪಾರ್ವತಿ ಎಂದು ಕರೆಯಲಾಯಿತು. ಜನರು ಈ ಕಥೆಯನ್ನು ಆಧರಿಸಿ ಸತಿಯನ್ನು ಸಮರ್ಥಿಸಿಕೊಳ್ಳುತ್ತಿದ್ದರು, ಆದರೆ ಸತಿಯು ತನ್ನನ್ನು ತಾನು ಸುಟ್ಟುಕೊಂಡಾಗ ಅವಳು ವಿಧವೆಯಾಗಿರಲಿಲ್ಲ, ಆದ್ದರಿಂದ ಈ ಆಚರಣೆಯು ಈ ಕಥೆಗೆ ಸಂಬಂಧಿಸಿಲ್ಲ. ಕಾಲಾಂತರದಲ್ಲಿ, ಇದು ಬಲವಂತದ ಅಭ್ಯಾಸವಾಯಿತು. ಈ ರೀತಿ ಸಾಯಲು ಇಷ್ಟಪಡದ ಮಹಿಳೆಯರನ್ನು ವಿವಿಧ ರೀತಿಯಲ್ಲಿ ಸತಿಹೋಗಲು ಒತ್ತಾಯಿಸಲಾಯಿತು. ಸಾಂಪ್ರದಾಯಿಕವಾಗಿ, ವಿಧವೆ ಸಮಾಜದಲ್ಲಿ ಯಾವುದೇ ಪಾತ್ರವನ್ನು ವಹಿಸುವಂತಿರಲಿಲ್ಲ ಮತ್ತು ಅವಳನ್ನು ಹೊರೆ ಎಂದು ಪರಿಗಣಿಸಲಾಗಿತ್ತು. ಆದ್ದರಿಂದ, ಮಹಿಳೆಗೆ ತನ್ನ ಮೇಲೆ ಒತ್ತಡ ಹೇರಲಾಯಿತು.

**ಸತಿಯ ಇತಿಹಾಸ:**

ಸತಿ ಪದ್ಧತಿಯು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿತ್ತು ಎಂದೇನೂ ಭಾವಿಸಬೇಕಾಗಿಲ್ಲ. ಭಾರತದಲ್ಲಿ ರಾಮಾಯಣ ಮಹಾಭಾರತದ ಕಾಲದಲ್ಲಿ ಸತಿ ಪದ್ಧತಿ ಇತ್ತು ಎನ್ನುವುದು ತಿಳಿದಿದೆ. ಪಾಂಡುವಿನ ಹೆಂಡತಿ ಮಾದ್ರಿ ಮತ್ತು ಕೃಷ್ಣನ ಹೆಂಡತಿಯರಲ್ಲಿ ಕೆಲವರು ತಮ್ಮ ಗಂಡಂದಿರ ಮರಣಾನಂತರ ಅಗ್ನಿಪ್ರವೇಶ ಮಾಡಿದರು. ಉತ್ತರ ಭಾರತದಲ್ಲಿ ದಕ್ಷಿಣ ಭಾರತಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸತಿ ಪದ್ಧತಿ ಇತ್ತು ಎನ್ನುವುದು ತಿಳಿದು ಬಂದಿದೆ.

- ಗುಪ್ತ ಸಾಮ್ರಾಜ್ಯದ ಆಳ್ವಿಕೆಯ ಸಾ.ಶ 320 ರಿಂದ 550 ನಡುವೆ ಸತಿಸಹಗಮನ ಮೊದಲು ಕಾಣಿಸಿಕೊಂಡಿತು ಎಂದು ಐತಿಹಾಸಿಕ ದಾಖಲೆಗಳು ಹೇಳುತ್ತವೆ. ಸತಿಯ ಘಟನೆಗಳನ್ನು ಮೊದಲು ನೇಪಾಳದಲ್ಲಿ ಸಾ.ಶ 464 ರಲ್ಲಿ, ಮಧ್ಯಪ್ರದೇಶದಲ್ಲಿ ಸಾ.ಶ 510 ರಲ್ಲಿ ದಾಖಲಿಸಲಾಯಿತು, ಈ ಪದ್ಧತಿಯು ನಂತರ ರಾಜಸ್ಥಾನಕ್ಕೆ ಹರಡಿತು ಅಲ್ಲಿ ಶತಮಾನಗಳಿಂದ ಹೆಚ್ಚಿನ ಸಂಖ್ಯೆಯ ಸತಿ ಪ್ರಕರಣಗಳು ಸಂಭವಿಸಿದವು.
- ಸಾ.ಶ 10ನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಸತಿ ಪದ್ಧತಿ ಇತ್ತು ಎಂಬ ಸುಳಿವುಗಳು ದೊರೆತಿವೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಬೆನ್ನೂರಿನಲ್ಲಿ ದೊರೆತ ಕ್ರಿ.ಶ 972 ರ ಶಾಸನ ಸತಿ ಪದ್ಧತಿಯನ್ನು ಕುರಿತು ತಿಳಿಸುವ ಮೊದಲ ಶಾಸನವಾಗಿದೆ. ಬಿದಿಯಣ್ಣ ಸತ್ತಾಗ ಅವನ ಹೆಂಡತಿ ಜಕ್ಕಬ್ಬೆ ಸತಿ ಹೋದದ್ದನ್ನು ಈ ಶಾಸನವು ದಾಖಲಿಸಿದೆ. ಜಕ್ಕಬ್ಬೆಯದು ಸಹಗಮನ. ಗಂಡನ ಸಾವಿನ ನಂತರ ಅಥವಾ ಸಾವಿನ ಸುದ್ದಿ ತಿಳಿದ ನಂತರ ಅಣಿಯಾಗಿ ಸಾಯುವುದು ಅನುಗಮನ. ಅಂತಹ ಅನುಗಮನದ ಒಂದು ದಾಖಲೆಯೇ ಪ್ರಸ್ತುತ ಶಾಸನ.
- ಬೆಳತೂರಿನ ಬಿನಕಲಮ್ಮನ ಗುಡಿಯ ಬಳಿ ಇರುವ ಶಾಸನವು ಚೋಳ ರಾಜ ರಾಜೇಂದ್ರದೇವನ ಆಳ್ವಿಕೆಯ ಆರನೆಯ ವರ್ಷ ಹಾಗೂ ಸಾ.ಶ ವರ್ಷ 979ನೆಯ ಹೇಮಳಂಬಿ ಸಂವತ್ಸರದ ಕಾರ್ತೀಕ ಮಾಸದ ಕೃಷ್ಣ ಪಕ್ಷ ದ್ವಾದಶಿ ಸೋಮವಾರದಂದು ದಾಖಲಿತವಾಗಿದೆ. ಸಾ.ಶ ವರ್ಷಗಳಲ್ಲಿ ಈ ಕಾಲವು 27/10/1157 ಎಂದು ಪರಿಗಣಿಸಬಹುದು. ಈ ಶಾಸನವು ದೇಕಬ್ಬೆ ಎಂಬಾಕೆ ಸತಿ ಹೋದ ವಿಷಯವನ್ನು ವಿವರಿಸಿದೆ. ದೇಕಬ್ಬೆಯ ಗಂಡ ಏಚ. ಈತ ವೀರನಾದ ನು, ನವಲೆನಾಡ ಅಧಿಪತಿಯಾಗಿದ್ದನು. ಈತ ಕುರುವಂದ ಕುಲಕ್ಕೆ ಸೇರಿದವನಾಗಿದ್ದನು. ಏಚನು ವಿನಯಚಿಂತಾಮಣಿ ಎನಿಸಿಕೊಂಡ ದೇಕಬ್ಬೆಯನ್ನು ಮದುವೆಯಾಗಿದ್ದ. ದೇಕಬ್ಬೆಯು ನುಗು ನಾಡಿನ ಅಧಿಪತಿ ರವಿಗ ಮತ್ತು ಪೊನ್ನಕ್ಕನ ಮಗಳು. ಈ ವಂಶದವರು ಸಕಲ ಜಗಸ್ತುತರು, ವಚೋಗ್ರಗಣ್ಯರು, ಊರ್ಜಿತ ಪುಣ್ಯರು ಮತ್ತು ವಿಸ್ತಾರ ಚಾರುವೀರರು. ಇಂತಹ ವಂಶದಲ್ಲಿ ರವಿಗ ಹುಟ್ಟಿದ್ದ. ರವಿಗನ ಹುಟ್ಟಿನೊಡನೆ ಅರಿವು, ಅರವಿನೊಡನೆ ಆಯವೂ, ಆಯದೊಡನೆ ತ್ಯಾಗವೂ ಹುಟ್ಟಿದವು ಎಂದು ಶಾಸನ ಕವಿ ಹೊಗಳಿದ್ದಾನೆ. ಯಾವ ಕಾರಣಕ್ಕೋ ಏಚನು ತನ್ನ ದಾಯಾದಿಗಳೊಡನೆ ಹೋರಾಡಿ ಅವರಲ್ಲೊಬ್ಬನನ್ನು ಕೊಂದನೆಂಬ ಕಾರಣದಿಂದ ಚೋಳನ ಕಡೆಯವರು ಅವನನ್ನು ಬಂಧಿಸಿ ತಲಕಾಡಿಗೆ ಕರೆದೊಯ್ದು ಅವನು ಮಾಡಿದ ಅಪರಾಧಕ್ಕೆ ಮರಣದಂಡನೆಯನ್ನು ವಿಧಿಸಿದರು. ಅವನ ಸಾವಿನ ಸುದ್ದಿ ತಿಳಿದ ತಕ್ಷಣ ದೇಕಬ್ಬೆಯು ಸತಿ ಹೋಗುವ ನಿರ್ಧಾರ ಮಾಡಿದಳು. ಈ ಪ್ರಸಂಗವನ್ನು ಶಾಸನ ಕವಿಯು ಒಂದೇ ಪದ್ಯದಲ್ಲಿ ವರ್ಣನೆ ಮಾಡಿದ್ದಾನೆ.

**‘‘ಕವಿಕಾಲವೇಳನೆನಿಸಿದ ಕಲಿಚಾಗಿಯನಿಱದು ಕೊನ್ದರೆಂಬುದು ಮಾತಂ**

**ಲಲಿತಾಂಗಿ ಕೇಳ್ದ ರವಿಗನ ಕುಲದೀಪಕಿ ಸಾಯಲೆನ್ದು ಕೊಣ್ಡಕೆ ನೆಡೆದಳ್''**

ಇಲ್ಲಿ ಸಾಯುವ ನಿರ್ಧಾರ ದೇಕಬ್ಬೆಯದಾಗಿತ್ತು, ಬೇರೆಯವರ ಬಲವಂತದಿಂದ ತೆಗೆದುಕೊಂಡ ನಿರ್ಧಾರವಾಗಿರಲಿಲ್ಲ. ತಂದೆ ತಾಯಿ, ಬಂಧುಗಳೆಲ್ಲರೂ ಸಾಯುವುದು ಬೇಡ ಎಂದು ಬುದ್ಧಿ ಹೇಳಿದರು. ಆದರೆ ದೇಕಬ್ಬೆಯ ನಿರ್ಧಾರವು ಅಚಲವಾಗಿತ್ತು.''ನಗುನಾಡಾಧಿಪತಿ ರವಿಗನ ಮಗಳಾಗಿಯುಮನೆತ್ತ ನವಿಲೆನಾಡಧಿಪತಿಗಾಂ ನೆಗಳೆ ಸತಿಯಾಗಿ ಬಾಳ್ವುದು ಬಗೆದರ್ಪ್ಪನೆ ಕೊಟ್ಟ ಕೊಣ್ಡ ಮನೆಯೆಸಮರಯಲ್'' ಎಂದು ಎಲ್ಲರ ಮಾತನ್ನು ನಯದಿಂದ ತಳ್ಳಿಹಾಕಿ, ಭೂಮಿ, ಹೊನ್ನ, ಉಡುಗೆ, ಗೋವು, ಧನ ಇತ್ಯಾದಿಗಳನ್ನು ದಾನ ಮಾಡುತ್ತಾ ದೇಕಬ್ಬೆ ಕೈ ಮುಗಿದು ಉರಿಯುತ್ತಿದ್ದ ಬೆಂಕಿಯನ್ನು ಪ್ರವೇಶಿಸಿದಳು. ಮಗಳ ನೆನಪಿಗಾಗಿ ರವಿಗನು ಮಾಸ್ತಿಕಲ್ಲನ್ನು (ಮಾಸ್ತಿಗಲ್ಲು) ಹಾಕಿಸಿದ್ದಾನೆ. ಅನುಗಮನವನ್ನು ಕುರಿತ ಈ ಶಾಸನವು ದೇಕಬ್ಬೆಯ ಅಚಲ ನಿರ್ಧಾರವನ್ನು ತಿಳಿಸುತ್ತದೆ; ಜೊತೆಗೆ ಆ ಕಾಲಕ್ಕೆ ಸತಿ ಹೋಗುವ ಪದ್ಧತಿಯು ಕಡ್ಡಾಯವೇನೂ ಆಗಿರಲಿಲ್ಲ ಎಂದು ಖಚಿತಪಡಿಸುತ್ತದೆ. ಸತಿ ಹೋಗುವುದು ಐಚ್ಛಿಕ ವಿಷಯವಾಗಿತ್ತು. ಸತಿ ಹೋಗುವುದನ್ನು ತಡೆಯುವ ಪ್ರಯತ್ನಗಳೂ ನಡೆಯುತ್ತಿದ್ದುದನ್ನು ಶಾಸನವು ಸ್ಪಷ್ಟಪಡಿಸಿದೆ.

- ಆರಂಭದಲ್ಲಿ ಸತಿ ಪದ್ಧತಿಯು ಕ್ಷತ್ರಿಯ ಕುಲದ ರಾಜ ಮನೆತನಗಳಿಗೆ ಮಾತ್ರ ಸೀಮಿತವಾಗಿತ್ತು. ನಂತರ ಕೆಳ ಜಾತಿಯವರು ಈ ಆಚರಣೆಯನ್ನು ಅನುಸರಿಸಲು ಪ್ರಾರಂಭಿಸಿದರು. ಇದು ಎಲ್ಲ ಸಾಮಾಜಿಕ ವರ್ಗಗಳಲ್ಲಿ ವ್ಯಾಪಕವಾಗಿ ಆಚರಣೆಯಲ್ಲಿತ್ತು. ಕ್ರಿ.ಶ 15 ಮತ್ತು 18 ನೇ ಶತಮಾನದ ನಡುವೆ ಈ ಅವಧಿಯಲ್ಲಿ ಪ್ರತೀವರ್ಷ ಸುಮಾರು ಸಾವಿರ ವಿಧವೆಯರನ್ನು ಜೀವಂತವಾಗಿ ಸುಡಲಾಯಿತು. ಸಾಮಾನ್ಯವಾಗಿ ಭಾರತ ಮತ್ತು ನೇಪಾಳದಲ್ಲಿ ಆದಾಗ್ಯೂ ಈ ಅಭ್ಯಾಸವು ಇತರ ಸಂಪ್ರದಾಯಗಳಂತೆ ರಷ್ಯಾ, ಫಿಜಿ ಮತ್ತು ವಿಯೆಟ್ನಾಂ ನಂತಹ ದೇಶಗಳಲ್ಲಿ ಜನಪ್ರಿಯವಾಗಿತ್ತು ಎಂದು ದಾಖಲೆಗಳು ತಿಳಿಸುತ್ತವೆ.
- ಸತಿ ಹೋಗುವುದು ಎಂದರೆ ಸತಿಯಾದವಳು ಗಂಡನ ಸಾವಿನ ನಂತರ ಅವನ ಜೊತೆಗೆ (ಸಹಗಮನ) ಅಥವಾ ಅವನನ್ನು ಅನುಸರಿಸಿ (ಅನುಗಮನ) ಸಾವಿಗೆ ಅಣಿಯಾಗುವುದು, ಇದು ಕಡ್ಡಾಯವಾಗಿರಲಿಲ್ಲ ಎನ್ನುವುದನ್ನು ಲಕ್ಕುಂಡಿಯ ಪ್ರಸಿದ್ಧ ಅತ್ತಿಮಬ್ಬೆಯ ಶಾಸನ ಖಚಿತಪಡಿಸಿದೆ. ಅತ್ತಿಮಬ್ಬೆಯ ಗಂಡ ನಾಗದೇವ ಸತ್ತಾಗ ಅವನ ಕಿರಿಯ ಹೆಂಡತಿ ಅತ್ತಿಮಬ್ಬೆಯ ತಂಗಿ ಗುಂಡಬ್ಬೆ ಮಾತ್ರ ಸತಿಹೋದಳು, ಮಗನಾದ ಅಣ್ಣಿಗ ದೇವನ ರಕ್ಷಣೆಗೆ ಅತ್ತಿಮಬ್ಬೆ ಉಳಿದಳು. ಚಿಕ್ಕವಯಸ್ಸಿನ ಹೆಣ್ಣು ಸತಿಹೋಗುವುದನ್ನು ತಪ್ಪಿಸಲು ಕುಟುಂಬದ ಮತ್ತು ಊರಿನ ಹಿರಿಯರು ಪ್ರಯತ್ನಿಸುತ್ತಿದ್ದ ಹಲವು ಉದಾಹರಣೆಗಳು ಇವೆ. ಆದರೆ ತಮ್ಮ ಗಂಡ ಸತ್ತಾಗ ಸಾವಿನಲ್ಲೂ ಅವನ ಹಿಂಬಾಲಿಸಲು ಭಾರತೀಯ ನಾರಿಯರು ಇಚ್ಛಿಸುತ್ತಿದ್ದರು ಎಂದು ತಿಳಿಯಲಾಗಿದೆ.

**ಜೊಹರ್ ಪದ್ಧತಿ:**

ರಾಜಸ್ಥಾನ ಮತ್ತು ಮಧ್ಯಪ್ರದೇಶದ ರಜಪೂತ ಮಹಿಳೆಯರು ''ಜೊಹರ್'' ಪದ್ಧತಿಯನ್ನು ರೂಢಿಮಾಡಿಕೊಂಡಿದ್ದರು. ಇದು ರಾಜಮನೆತನದ ವಿಧವೆಯರ ಸಾಮೂಹಿಕ ಆತ್ಮಹತ್ಯೆಯಾಗಿದ್ದು, ವೈರಿಪಡೆ ಸೈನಿಕರಿಂದ ಸೆರೆಹಿಡಿಯಲ್ಪಟ್ಟು ಅತ್ಯಾಚಾರ ಮತ್ತು ಅವಮಾನಕ್ಕೆ ಒಳಗಾಗುವುದಕ್ಕಿಂತ ಸಾಯುವುದೆ ಮೇಲೆಂದು ಜೊಹರಗೆ ಆದ್ಯತೆ ನೀಡಿದ್ದರು. ಭಾರತದ ಮಧ್ಯಕಾಲಿನ ಇತಿಹಾಸದಲ್ಲಿ ದೆಹಲಿ ಸುಲ್ತಾನರು ಮತ್ತು ಮೊಘಲರ ಆಳ್ವಿಕೆಯ ಅವಧಿಯಲ್ಲಿ ಈ ಪದ್ಧತಿಯನ್ನು ರಜಪೂತ ಮಹಿಳೆಯರು ತಮ್ಮ ಆತ್ಮರಕ್ಷಣೆಗೆ ಈ

ನಿರ್ಧಾರಗಳನ್ನು ಸ್ವ ಇಚ್ಛೆಯಿಂದ ತೆಗೆದುಕೊಳ್ಳುತ್ತಿದ್ದರು.

**ಮರಣದಂಡನೆಯ ವಿಧಾನಗಳು:**

ಸತಿಯ ಆಚರಣೆಯನ್ನು ವಿವಿಧ ವಿಧಾನಗಳಲ್ಲಿ ನಡೆಸಲಾಯಿತು ಎಂದು ವಿವಿಧ ದಾಖಲೆಗಳು ನಮಗೆ ತಿಳಿಸುತ್ತವೆ. ಹೆಚ್ಚಿನ ದಾಖಲೆಗಳು ತಮ್ಮ ಗಂಡನ ಅಂತ್ಯಕ್ರಿಯೆಯ ಚಿತಾಕಾರದ ಮೇಲೆ ಕುಳಿತಿರುವ ಅಥವಾ ಮೃತದೇಹದ ಪಕ್ಕದಲ್ಲಿ ಮಲಗಿರುವ ಮಹಿಳೆಯರ ಬಗ್ಗೆ ವಿವರಿಸುತ್ತವೆ. ಕೆಲವರು ಹೆಂಗಸರು ಬೆಂಕಿಯನ್ನು ಹೊತ್ತಿಸಿದ ನಂತರ ಅದರೊಳಗೆ ಪ್ರವೇಶ ಮಾಡುತಿದ್ದರು ಎಂದು ಹೇಳುತ್ತಾರೆ, ಈ ಪದ್ಧತಿಯು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತಿತ್ತು, ಹಲವಾರು ಇತರ ಪ್ರದೇಶಗಳಲ್ಲಿ ಗಂಡನ ಶವವನ್ನು ದಹನಕಾರಿ ಕಚ್ಚಾ ಸಾಮಗ್ರಿಗಳೊಂದಿಗೆ ಹೊಂಡದಲ್ಲಿ ಇರಿಸಲಾಯಿತು, ಮತ್ತು ಬೆಂಕಿ ಹೊತ್ತಿಸಿದ ನಂತರ ವಿಧವೆಯು ಜಿಗಿಯಬೇಕಾಯಿತು. ಮರಣದಂಡನೆಯ ಕೆಲವು ಕಡಿಮೆ ಹಿಂಸೆಯ ವಿಧಾನಗಳು ಸಹ ಆಗ ಪ್ರಚಲಿತದಲ್ಲಿದ್ದವು.

ಉದಾಹರಣೆಗೆ ಶವಸಂಸ್ಕಾರದ ಚಿತಾಗಾರದ ಮೇಲೆ ಇರಿಸುವ ಮೊದಲು ಮಹಿಳೆ ವಿಷ ಅಥವಾ ಔಷಧಗಳನ್ನು ಸೇವಿಸಬಹುದು, ಇದರಿಂದ ಅವಳು ನಿಧಾನವಾಗಿ ಸಾಯಲು ಪ್ರಾರಂಭಿಸುತ್ತಾಳೆ ಅಥವಾ ಕನಿಷ್ಠ ಪ್ರಜ್ಞಾಹೀನರಾಗಬಹುದು. ಕೆಲವೊಮ್ಮೆ ವಿಧವೆಯು ಸ್ವತಃ ಹಾವು-ಕಚ್ಚಿಸಿಕೊಳ್ಳುವಿಕೆಗೆ ಒಳಗಾಗುತ್ತಾಳೆ ಅಥವಾ ಬೆಂಕಿಗೆ ಪ್ರವೇಶಿಸುವ ಮೊದಲು ಪ್ರಜ್ಞಾಹೀನಳಾಗುವ ವಿಧಾನಗಳನ್ನು ಬಳಸಲಾಗುತ್ತಿತ್ತು. ಮತ್ತು ಮಾದಕತೆಯನ್ನು ತರುವಂತಹ ಪಾನೀಯಗಳನ್ನು ಕುಡಿಸಲಾಗುತ್ತಿತ್ತು.

**ಸತಿಸಹಗಮನಕ್ಕೆ ಸಾಮಾಜಿಕ ಅಪವಾದಗಳು:**

ಸತಿ ಹೋಗುವ ಕೆಲವು ಮಹಿಳೆಯರಿಗೆ ವಿನಾಯಿತಿ ನೀಡಿರುವ ಉದಾಹರಣೆಗಳಿವೆ. ಸತಿ ನಿಯಮವು ಗರ್ಭಿಣಿ, ಮುಟ್ಟಿನ ಅಥವಾ ಚಿಕ್ಕಮಕ್ಕಳನ್ನು ಹೊಂದಿರುವವರಿಗೆ ಈ ಆಚರಣೆಯಲ್ಲಿ ಭಾಗವಹಿಸುವಂತಿರಲಿಲ್ಲ. ಸತಿ ಹೋದ ಮಹಿಳೆಯರು ಪರಿಶುದ್ಧವಾಗಿ ಸತ್ತರು ಎಂದು ಹೇಳಲಾಗುತ್ತದೆ, ಆಕೆಯು ಮುಂದಿನ ಜನ್ಮದಲ್ಲಿ ಉತ್ತಮ ಕರ್ಮ ಮತ್ತು ಹೆಚ್ಚು ಉತ್ತಮ ಜೀವನವನ್ನು ಹೊಂದುತ್ತಾಳೆ ಎಂಬ ನಂಬಿಕೆ ಇತ್ತು. ಆದರೆ ಬ್ರಾಹ್ಮಣ ಮಹಿಳೆಯರಿಗೆ ಈ ಸಮರ್ಥನೆಯು ಕೆಲಸ ಮಾಡಲಿಲ್ಲ, ಏಕೆಂದರೆ ಅವರು ಈಗಾಗಲೇ ಅತ್ಯುನ್ನತ ಕುಲಕ್ಕೆ ಸೇರಿದವರಾಗಿದ್ದರು, ಆದ್ದರಿಂದ ಅವರು ಸತಿಯಿಂದ ಪ್ರಯೋಜನವನ್ನು ಪಡೆಯುವುದಿಲ್ಲ ಮತ್ತು ಅದನ್ನು ಅಭ್ಯಾಸ ಮಾಡಬೇಕಾಗಿರಲಿಲ್ಲ.

**ಸತಿ ಕೈ ಮುದ್ರೆಗಳು ಮತ್ತು ಸತಿ ಕಲ್ಲುಗಳು:**

ರಾಜಸ್ಥಾನದಲ್ಲಿ ರಾಜಮನೆತನದ ಮಹಿಳೆಯರಿಂದ ಸತಿಸಹಗಮನ ಆಗಾಗ್ಗೆ ಆಚರಣೆ ಮಾಡಲಾಗುತ್ತಿತ್ತು. ಅವರ ನೆನಪಿಗೋಸ್ಕರ ಸತಿಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ತಮ್ಮ ಪ್ರಾಣವನ್ನು ತ್ಯಜಿಸುವ ಮೊದಲು ರಾಣಿಯರು ತಮ್ಮ ಕೈಗಳ ಮುದ್ರೆಗಳನ್ನು ಗೋಡೆಯ ಮೇಲೆ ಹಾಕುತ್ತಿದ್ದರು. ಇವರನ್ನು ಧೀರ ಮತ್ತು ಭಕ್ತಿಯ ಪತ್ನಿಯರು ಎಂದು ನೆನಪಿಸಿಕೊಳ್ಳುತ್ತಾರೆ. ಚಿತ್ತೊರಗಡ್ ಕೋಟೆಯೊಳಗೆ ಈ ಕೆಲವು ಕೈ ಮುದ್ರೆಗಳನ್ನು ಈಗಲೂ ಕಾಣಬಹುದು. ಕರ್ನಾಟಕ ಹಾಗೂ ಇತರ ಭಾಗಗಳಲ್ಲಿ ಸಹಗಮನದ ರೀತಿಯ ಶಿಲ್ಪಗಳಿರುವ ಕಲ್ಲಿನ ಪಟ್ಟಿಕೆಯ ಶಾಸನಸಹಿತ ಕಲ್ಲುಗಳು ಹಾಗೂ ಕೇವಲ ಸತಿಹೊಗುತ್ತಿರುವ ಮಹಿಳೆಯ ಕೈ ಶಿಲ್ಪಗಳಿರುವ ಕಲ್ಲುಗಳು ಊರ ಹೆಬ್ಬಾಗಿಲ ಬಳಿ, ದೇವಸ್ಥಾನಗಳ ಬಳಿ, ಕೆರೆ ಬಾವಿಗಳ ದಡಗಳ ಮೇಲೆ, ಹೊಲಗಳಲ್ಲಿ ಮತ್ತು ಊರ ಮಧ್ಯಭಾಗದಲ್ಲಿ ಈ ರೀತಿಯ ಮಹಾಸತಿಯರ

ಕಲ್ಲುಗಳನ್ನು ನಿಲ್ಲಿಸಿರುವುದನ್ನು ಈಗಲೂ ನೋಡಬಹುದಾಗಿದೆ.

**ಉಪಸಂಹಾರ:**

ಸತಿ ಪದ್ಧತಿಯ ಆಚರಣೆಗಳು ದೇಶದಾದ್ಯಂತ ಅಲ್ಲದೆ ಹೊರದೇಶಗಳಲ್ಲಿಯೂ ಕೂಡ ಸಾಕಷ್ಟು ಕಂಡುಬರುತ್ತವೆ. ಮಹಿಳೆಯರನ್ನು ಸತಿತ್ವದ ಪ್ರತೀಕವಾಗಿ ಈ ರೀತಿಯ ಆಚರಣೆಗಳನ್ನು ಆಚರಿಸಲು ಪ್ರೇರೆಪಿಸಿದ ಸಾಕಷ್ಟು ಘಟನೆಗಳು ಇತಿಹಾಸದಲ್ಲಿ ಉಲ್ಲೇಖಿತವಾಗಿವೆ. ಹಾಗಾಗಿ ನಮಗೆ ಈ ರೀತಿಯ ಮಾಸ್ತಿಕಲ್ಲುಗಳು ಸಾಕಷ್ಟು ಲಭ್ಯವಾಗುತ್ತವೆ. ಮಹಿಳಾ ಅಸ್ಮಿತೆ ಮೌಲ್ಯಾದರ್ಶಗಳನ್ನು ಪ್ರಚುರಪಡಿಸುವ ಚರಿತ್ರೆ ಸಂರಚಿತವಾಗಿವೆ. ತಮಗೆ ಲಭ್ಯವಾಗಿರುವಂತ ಅತ್ಯಲ್ಪ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಆಡಳಿತ, ಸಾಂಸ್ಕೃತಿಕ ಕ್ಷೇತ್ರದಲ್ಲಿ ನಿಷ್ಠೆಯಿಂದ ಸಾಕಷ್ಟು ಸಾಧನೆ ಮಾಡಿ ಸೈ ಎನಿಸಿಕೊಂಡ ಮಹಿಳೆಯರಿಗೆ ಏನು ಕಮ್ಮಿ ಇಲ್ಲ. ಇಂತಹ ಮಹಿಳೆಯರ ಚರಿತ್ರೆ ಅನಾವರಣಗೊಂಡು ದಾಖಲಾಗಿದೆ. ಇಂದು ಕೂಡ ಮಹಿಳೆಯರು ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಹಾರಿ ಸಾಧನೆಗೈದದ್ದು ಹೆಮ್ಮೆಯ ಸಂಗತಿ. ಋಗ್ವೇದದ ಕಾಲದಿಂದ ಇಲ್ಲಿಯವರೆಗೂ ಕೂಡ ಮಹಿಳೆಯರು ಸಂಘರ್ಷಗಳ ನಡುವೆ ತಮ್ಮ ಸಾಧನೆಯನ್ನು ಮಾಡಿ ಮಾದರಿಯಾಗಿದ್ದಾರೆ. ಇಂಥವರ ಸಾಲಿನಲ್ಲಿ ಗಂಡನ ಸಾವಿನ ನಂತರ ಅವನ ಜೊತೆ ಚಿತೆಯಲ್ಲಿ ಹಾರಿ ಜೀವಕಳೆದುಕೊಂಡು ಮಹಾಸತಿಯಾಗಿ ಜನಮನದಲ್ಲಿ ಉಳಿಯುವುದಕ್ಕೋಸ್ಕರ ತ್ಯಾಗ ಮಾಡಿದ ಮಹಿಳೆಯರ ಸಂಖ್ಯೆಯು ಏನು ಕಮ್ಮಿ ಇಲ್ಲ. ಈ ನಿಟ್ಟಿನಲ್ಲಿ ನಮಗೆ ಸಾಕಷ್ಟು ಸತಿಗಲ್ಲುಗಳು ಎಲ್ಲೆಡೆಯಲ್ಲಿಯೂ ದೊರೆತು ಮೂಕ ಸಾಕ್ಷಿಗಳಾಗಿವೆ. ಪುರುಷನ ಶಕ್ತಿ, ಪ್ರೇರಣೆ, ಸ್ಫೈರಣೆ, ಲೋಕದೃಷ್ಟಿ, ಪ್ರೇರಕ ಶಕ್ತಿಯೇ ಮಹಿಳೆ. ಈ ವಿಷಯ ಚರಿತ್ರೆಯಲ್ಲಿ ದಾಖಲಾಗದೆ ಅನುಭವಗಳಿಗೇ ಇರುವುದು ವಿಷಾದನೀಯ ಸಂಗತಿ. ಸಂಸ್ಕೃತಿ ಆದರ್ಶಗಳಿಗೆ ಹೆಸರುವಾಸಿಯಾಗಿದ್ದ ಭವ್ಯ ಭಾರತದಲ್ಲಿ ಅತ್ಯಂತ ನೋವಿನ ಘಟನೆಗಳು ಸಂಭವಿಸಿರುವುದು ವಿಷಾದನೀಯ. ಅದರಲ್ಲಿ ಈ ಸತಿ ಸಹಗಮನ ಪದ್ಧತಿ ಕೂಡ ಒಂದು. ಸರ್ಕಾರವು ಸತಿಸಹಗಮನ ಪದ್ಧತಿ ನಿಷೇಧಕ್ಕೆ 1829 ರಲ್ಲಿ ಕಾನೂನನ್ನು ಜಾರಿಗೊಳಿಸಿದರು ಕೂಡ ಇಂತಹ ಘಟನೆಗಳು ರಾಜಸ್ಥಾನದಲ್ಲಿ ಪದೇ ಪದೇ ಜರುಗುತ್ತಲೇ ಇವೆ. ರೂಪಾ ಕನ್ವರ್ ವೈದ್ಯ ಆಗಿದ್ದರೂ ಕೂಡ ತನ್ನ ಪತಿಯೊಂದಿಗೆ ಸಹಗಮನ ಮಾಡಿದ್ದು ಇನ್ನೂ ಹಚ್ಚ ಹಸಿರಾಗಿದೆ. ಇಂತಹ ಘಟನೆಗಳು ಈಗಲೂ ಕೂಡ ಆಚರಿಸಲಾಗುತ್ತಿದ್ದು ಬೆಳಕಿಗೆ ಮಾತ್ರ ಬರುತ್ತಿಲ್ಲ. ಸರಕಾರವು ಈ ನಿಟ್ಟಿನಲ್ಲಿ ಕಠಿಣ ಕ್ರಮಗಳನ್ನು ಕೈಗೊಂಡು ಇಂತಹ ಘಟನೆಗಳು ಜರುಗದಂತೆ ಕ್ರಮವಹಿಸಬೇಕು ಎಂಬ ಆಶಯದೊಂದಿಗೆ.

## ಪರಾಮರ್ಶನ ಗ್ರಂಥಗಳು:


1. ಬಿ. ಆರ್. ಅಂಬೇಡ್ಕರ್ – "ಕ್ರಾಂತಿ ಮತ್ತು ಪ್ರತಿಕ್ರಾಂತಿ"
2. ನಾಗಭೂಷಣ ಸಿ., "ಕನ್ನಡ ಸಾಹಿತ್ಯ–ಸಂಸ್ಕೃತಿ–ಬಾಗಿನ"
3. ಗೋವಿಂದರಾಜು. ಸಿ.ಆರ್., (2017)., " ಚರಿತ್ರೆ ಅಧ್ಯಯನ ಸಂಪುಟ 10 "ವಿಜಯನಗರ ಚರಿತ್ರೆ: ಪ್ರವಾಸಿ ಬರೆಹಗಳಲ್ಲಿ ಹೆಣ್ಣು ಸಂಕಥನ".
4. Epigraphia Shashin., (CARI) Vol–3. 60. Boltur belonting to 1057 AD "Anugamana"



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.